# ರಾಮಕೃಷ್ಣ ಭಾವಪ್ರಚಾರ ಪರಿಷದ್

## ಉಗಮ, ಉದ್ದೇಶ, ವ್ಯಾಪ್ತಿ ಮತ್ತು ಕರ್ನಾಟಕದಲ್ಲಿ ಅದರ ವಿಸ್ತಾರ

## ಒಂದು ಪಕ್ಷಿನೋಟ

**ಸ್ವಾಮಿ ಮುಕ್ತಿದಾನಂದ**

ರಾಮಕೃಷ್ಣ ಭಾವಧಾರೆ ಹರಿದು ಬಂದ ಹಲವು ನಾಲೆಗನ್ನು ಒಂದು ವಾಹಿನಿಯಲ್ಲಿ ಒಳಪಡಿಸಲು ಆರಂಭಗೊಂಡ ಒಂದು ವೇದಿಕೆಯೇ 'ರಾಮಕೃಷ್ಣ ಭಾವಪ್ರಚಾರ ಪರಿಷತ್'. ಇದರ ಹಲವು ಆಯಾಮಗಳನ್ನು ಕುರಿತಂತೆ ಚಿಂತಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ 'ವಿವೇಕಪ್ರಭ'ದ ವ್ಯವಸ್ಥಾಪಕ ಸಂಪಾದಕರು. ರಾಮಕೃಷ್ಣ ಮಹಾಸಂಘದ ವಿಶ್ವಸ್ತ ಮಂಡಲಿಯ ಸದಸ್ಯರಾಗಿ ರುವ ಅವರು ಉತ್ತಮ ಚಿಂತಕರೂ, ಪ್ರವಚನಕಾರರೂ, ಲೇಖಕರೂ ಆಗಿದ್ದಾರೆ.




### ರಾಮಕೃಷ್ಣ ಮಹಾಸಂಘ- ಮುಖ್ಯವಾಹಿನಿ

ರಾಮಕೃಷ್ಣ ಭಾವಪ್ರಚಾರ ಪರಿಷದ್ ಎಂಬುದು ರಾಮಕೃಷ್ಣ-ವಿವೇಕಾನಂದ-ಶಾರದಾದೇವಿ ಭಾವಧಾರೆಯ ವಿಸ್ತೃತ ಸ್ವರೂಪ. ಕೊಲ್ಕತ್ತದ ಬೇಲೂರು ಮಠದಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ ಎಂಬುದು ಸ್ವಾಮಿ ವಿವೇಕಾನಂದರಿಂದ ತಮ್ಮ ಗುರುಗಳ ದಿವ್ಯ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟ ಸಂನ್ಯಾಸಿ ಸಂಘವಾಗಿದ್ದು, ಇದು ರಾಮಕೃಷ್ಣ-ವಿವೇಕಾನಂದ-ಶಾರದಾದೇವಿ ಭಾವಧಾರೆಯ ಮುಖ್ಯ ವಾಹಿನಿಯಾಗಿದೆ. ಇದು ಸುಮಾರು ಹನ್ನೆರಡು ದಶಕಗಳಿಂದ **'ಆತ್ಮನೋ ಮೋಕ್ಷಾರ್ಥಂ ಮತ್ತು ಜಗತ್ ಹಿತಾಯ ಚ'** ಎಂಬ ಧ್ಯೇಯವಾಕ್ಯವನ್ನಿಟ್ಟುಕೊಂಡು, ದಿವ್ಯತ್ರಯರ ಜೀವನ-ಸಂದೇಶವನ್ನು ಆಧರಿಸಿದ ಸೇವಾ ಮನೋಭಾವ ಮತ್ತು ಆಧ್ಯಾತ್ಮಿಕ ಸ್ಫೂರ್ತಿಯನ್ನು ದೇಶದ ಬಹುಭಾಗದಲ್ಲಿ ಪಸರಿಸುತ್ತಾ ಬಂದಿದೆ. ಈ ಮುಖ್ಯವಾಹಿನಿಯಿಂದ ಪ್ರಭಾವಿತಗೊಂಡ ಇನ್ನೂ ಸಾವಿರಾರು ಸಂಸ್ಥೆಗಳು ದಿವ್ಯತ್ರಯರ ಜೀವನ ಮತ್ತು ಸಂದೇಶವನ್ನು ಕೇಂದ್ರೀಕರಿಸಿಕೊಂಡು ಸ್ವತಂತ್ರವಾಗಿ ಮತ್ತು ವಿಪುಲವಾಗಿ ದೇಶಾದ್ಯಂತ ಮೂಡಿಬಂದುವು. ಸ್ವತಂತ್ರವಾಗಿ ಬೆಳೆದು, ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿರುವ ಈ ಕೇಂದ್ರಗಳು ರಾಮಕೃಷ್ಣ ಭಾವಧಾರೆಯಿಂದ ಸ್ಫೂರ್ತಿ ಪಡೆದು, ದೇಶದ ನಾನಾಕಡೆ ವಿವಿಧ ರೂಪಗಳಲ್ಲಿ ಉದಯಿಸಿದವು. ರಾಮಕೃಷ್ಣ ಮಹಾಸಂಘದ ಪ್ರೇರಣೆ ಮತ್ತು ಸಂಕಲ್ಪದಿಂದ ಅವುಗಳ ಉಗಮ ಮತ್ತು ವಿಸ್ತಾರ ಉಂಟಾಯಿತು. ರಾಮಕೃಷ್ಣ ಭಾವಧಾರೆಯನ್ನು ಸಮಾಜದ ಮೂಲೆ-ಮೂಲೆಯಲ್ಲಿ ಜನಮಾನಸಕ್ಕೆ ಒದಗಿಸುವ ಅತಿಮುಖ್ಯ ಪ್ರಯತ್ನವಿದು. ಇವುಗಳಲ್ಲಿ ಹೆಚ್ಚಿನವು ಶ್ರೀರಾಮಕೃಷ್ಣ ಸಂಘದ ಮುಖ್ಯವಾಹಿನಿಯ ಸಾಧುಗಳ ಮಾರ್ಗದರ್ಶನದಿಂದ, ಇನ್ನು ಕೆಲವು ರಾಮಕೃಷ್ಣ ಸಾಹಿತ್ಯದ ಪ್ರಭಾವದಿಂದ ಬೆಳೆದು ಮುಂದೆ ಬಂದವು.

### ಪೂರಕ ಘಟಕಗಳಾಗಿ ಭಾವಪ್ರಚಾರ ಕೇಂದ್ರಗಳು

ಶ್ರೀರಾಮಕೃಷ್ಣರ ಇಚ್ಛೆಯಂತೆ ರಾಮಕೃಷ್ಣರ ಅವತರಣದ ಉದ್ದೇಶವನ್ನು ಇನ್ನೂ ವಿಸ್ತರಿಸಿ, ಪುಷ್ಟಿಗೊಳಿಸಲು ರಾಮಕೃಷ್ಣ ಮಹಾಸಂಘಕ್ಕೆ ಪೂರಕವಾಗಿ ಭಾವಪ್ರಚಾರ ಮಾಡುತ್ತ, ಸ್ವತಂತ್ರವಾಗಿ ಪ್ರಾರಂಭಗೊಂಡ ಈ ಆಶ್ರಮಗಳು ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಇನ್ನಿತರ ಕ್ಷೇತ್ರದಲ್ಲಿ ತಮ್ಮದೇ ಆದ ರೀತಿಯಲ್ಲಿ ಜನಸಾಮಾನ್ಯರಿಗೆ ಸೇವೆ ಸಲ್ಲಿಸುತ್ತ ಬೆಳಕಿಗೆ ಬರುತ್ತಿವೆ.

ಸ್ವಾಮಿ ವಿವೇಕಾನಂದರಿಂದ ಮತ್ತು ಅವರ ಭಕ್ತ ಜನರಿಂದ ಶ್ರೀರಾಮಕೃಷ್ಣರು ಅವತಾರವೆಂದು ಪರಿಗಣಿಸಲ್ಪಟ್ಟಿದ್ದು ಮಾತ್ರ ವಲ್ಲದೆ, ಅವರ ವಿರಾಟ್ ಪ್ರಭಾವ ವಲಯವು ಅಧಿಕೃತವಾದ, ಅಪ ರೂಪವಾದ ಆಧ್ಯಾತ್ಮಿಕ ಅನುಭೂತಿಗಳಿಂದ ಸಂಪದ್ಭರಿತವಾಗಿದ್ದು, ಈ ಯುಗಕ್ಕೆ ಆಧ್ಯಾತ್ಮಿಕ ಸ್ಫೂರ್ತಿಯ ಗಹನವಾದ ಮತ್ತು ಅಧಿಕೃತ ವಾದ ಆವಶ್ಯಕ ನೆಲೆಯಾಗಿದೆ ಎಂಬುದು ಸರ್ವವಿದಿತ. ಈ ಯುಗ ದಲ್ಲಿ ಕಂಡುಬರುವ ನಾಸ್ತಿಕ ಬುದ್ಧಿಯನ್ನು ಆಸ್ತಿಕ್ಯದ ಕಡೆಗೆ ಪರಿ ವರ್ತಿಸುವ ಶಕ್ತಿ ಇಲ್ಲಿದೆ. ಭಾವಪ್ರಚಾರದ ನೂರಾರು ಆಶ್ರಮಗಳು ತಮ್ಮ ಸೇವಾಕಾರ್ಯದಿಂದ ಕೂಡ ಜನಮಾನಸವನ್ನು ಸಹಜವಾಗಿ ಸೆಳೆದು ಆವರಿಸಿ, ರಾಮಕೃಷ್ಣರ ಅವತರಣದ ಒಂದು ಪೂರಕ ಪ್ರೇರಣಾಶಕ್ತಿಯಾಗಿ ರಾಮಕೃಷ್ಣ ಮಹಾಸಂಘದ ಆಶ್ರಯದಲ್ಲಿ ಸ್ವತಂತ್ರವಾಗಿ ಬೆಳೆದು ಬಂದಿರುವುದನ್ನು ನಾವು ಗಮನಿಸಬಹುದು. ಹೇಗೆ ನದಿಗಳೆಲ್ಲವೂ ಸಮುದ್ರ ಸೇರಲು ಧಾವಿಸುವವೋ ಹಾಗೆ, ಏಕಾಕಿಯಾಗಿ ಬೆಳೆದು ಬಂದ ಅನೇಕ ರಾಮಕೃಷ್ಣ ಭಾವಧಾರೆಯ ವಾಹಿನಿಗಳು ಜನಮಾನಸವೆಂಬ ಸಮುದ್ರವನ್ನು ಸೇರಲು ತಮ್ಮ ತಮ್ಮ ಮಾರ್ಗವನ್ನು ಕಂಡುಕೊಳ್ಳುತ್ತಿರುವ ಕಾಲಘಟ್ಟದಲ್ಲಿ ರಾಮ ಕೃಷ್ಣ ಮಠ ಮತ್ತು ಮಿಷನ್ ಈ ಎಲ್ಲ ವಾಹಿನಿಗಳನ್ನು ರಾಮಕೃಷ್ಣ ಭಾವಪ್ರಚಾರದ ಖಾಸಗಿ ಕೇಂದ್ರಗಳೆಂದು ಪರಿಗಣಿಸಿತು. ಸಂಘವು ಅವುಗಳಿಗೆ ಒಂದು ದಿಗ್ದೆಸೆ ಮತ್ತು ಪರೋಕ್ಷವಾದ ಮಾರ್ಗದರ್ಶನ ವನ್ನು ಕೊಡಲು, ಮುಖ್ಯವಾಹಿನಿಯಾದ ರಾಮಕೃಷ್ಣ ಸಂಘ ದೊಡನೆ ಗುರುತಿಸಿಕೊಳ್ಳಲು, ಅವತಾರ ಕಾರ್ಯ, ದೇವಕಾರ್ಯ ಗಳ ಕಡೆಗೆ ಈ ಕೇಂದ್ರಗಳನ್ನು ಪ್ರೇರೇಪಿಸಲು ಮತ್ತು ಯೋಗ್ಯ ರೀತಿಯಲ್ಲಿ ರಾಮಕೃಷ್ಣರ ತತ್ತ್ವಾದರ್ಶಗಳನ್ನು ಪಾಲಿಸುತ್ತಾ ಈ ಖಾಸಗಿ ಆಶ್ರಮಗಳು ತಮ್ಮ ತಮ್ಮ ಕ್ಷೇತ್ರದ ಸೇವಾಕಾರ್ಯವನ್ನು ಸುಸೂತ್ರವಾಗಿ ಕೈಗೊಳ್ಳಲು ಹತ್ತು ಸೂತ್ರಗಳನ್ನು ಒಳಗೊಂಡ 'ರಾಮಕೃಷ್ಣ ಭಾವಪ್ರಚಾರ ಪರಿಷದ್' ಎಂಬ ಹೆಸರಿನೊಂದಿಗೆ ರಾಷ್ಟ್ರೀಯ ವ್ಯಾಪ್ತಿಯುಳ್ಳ ಒಕ್ಕೂಟವನ್ನು ರಚಿಸಿ, ರಾಮಕೃಷ್ಣ ಸಂಘಕ್ಕೆ ಪೂರಕವಾದ ಒಂದು ನೂತನ ಆಯಾಮವನ್ನು ಸ್ಥಾಪಿ ಸಿತು. ರಾಮಕೃಷ್ಣ ಮಹಾಸಂಘದ ೧೧ನೇ ಅಧ್ಯಕ್ಷರಾದ ಪೂಜ್ಯ ವೀರೇಶ್ವರಾನಂದಜಿಯವರ ಮತ್ತು ಇತರ ಧರ್ಮದರ್ಶಿ ಹಿರಿಯ ಸ್ವಾಮಿಗಳ ಚಿಂತನ ಮಂಥನದಿಂದ ಇದು ೧೯೮೩ರಲ್ಲಿ ಸ್ಥಾಪನೆ ಗೊಂಡಿತು. ಬೇಲೂರು ಮಠದ ಧರ್ಮದರ್ಶಿಗಳ ಸಮಿತಿಯು ರಚಿತವಾಗಿ, ರಾಮಕೃಷ್ಣ ಭಾವಪ್ರಚಾರ ಪರಿಷದ್‌ನ ಆಶ್ರಯದಲ್ಲಿ ಸೇವೆ ಸಲ್ಲಿಸುವ ಖಾಸಗಿ ಕೇಂದ್ರಗಳು ಈ ಕೆಳಗಿನ ಹತ್ತು ಸೂತ್ರ ಗಳನ್ನು ಪಾಲಿಸಬೇಕು ಎಂಬ ಮಾರ್ಗದರ್ಶಿ ನಿಯಮಾವಳಿಯನ್ನು ಜಾರಿಗೊಳಿಸಲಾಯಿತು:

೧. ಖಾಸಗಿ ಕೇಂದ್ರವನ್ನು ಧಾರ್ಮಿಕ ಟ್ರಸ್ಟ್ ಅಥವಾ ಸೊಸೈಟಿ ಗಳ ನೋಂದಣಿ ಕಾಯಿದೆಯಡಿಯಲ್ಲಿ ನೋಂದಾಯಿಸಬೇಕು. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನ ಆಧ್ಯಾತ್ಮಿಕ ಮತ್ತು ನೈತಿಕ ಆದರ್ಶಗಳನ್ನು ಮತ್ತು ತತ್ತ್ವಗಳನ್ನು ಅನುಸರಿಸಬೇಕು. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನ ರೀತಿಯಲ್ಲಿ ತಮ್ಮ ಚಟುವಟಿಕೆಗಳನ್ನು ನಡೆಸಬೇಕು.

೨. ಖಾಸಗಿ ಕೇಂದ್ರವು ಮಠ ಮತ್ತು ಮಿಷನ್‌ನೊಂದಿಗೆ ನಿಕಟ ಬಾಂಧವ್ಯವನ್ನು ಹೊಂದಿರಬೇಕು ಮತ್ತು ನಿಷ್ಠಾವಂತ ಮನೋ ಭಾವವನ್ನು ಹೊಂದಿರಬೇಕು.

೩. ಖಾಸಗಿ ಕೇಂದ್ರದ ನಿರ್ವಹಣಾ ಸಮಿತಿಯ ಸದಸ್ಯರು ರಾಜಕೀಯ ಅಥವಾ ರಾಜಕೀಯ ಪಕ್ಷಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರಬಾರದು. ಸದಸ್ಯರು ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನಿಂದ ಅನುಮೋದಿಸದ ಗುಂಪುಗಳು ಮತ್ತು ಸಂಸ್ಥೆಯೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರ ಬಾರದು.

೪. ಯಾವುದೇ ಕಾರಣಕ್ಕಾಗಿ ರಾಮಕೃಷ್ಣ ಮಹಾಸಂಘವನ್ನು ತೊರೆದ ಯಾವುದೇ ಸಂನ್ಯಾಸಿ ಅಥವಾ ಬ್ರಹ್ಮಚಾರಿ (ವೈದ್ಯಕೀಯ ಚಿಕಿತ್ಸೆಯ ಅನಿವಾರ್ಯ ಕಾರಣಗಳನ್ನು ಹೊರತುಪಡಿಸಿ) ಖಾಸಗಿ ಕೇಂದ್ರದಲ್ಲಿ ಉಳಿಯಲು ಅಥವಾ ಸಂಬಂಧ ಹೊಂದಲು ಅನು ಮತಿಸಬಾರದು.

೫. ಖಾಸಗಿ ಕೇಂದ್ರವು ತನ್ನ ಹಣಕಾಸು ಮತ್ತು ಲೆಕ್ಕಪತ್ರಗಳ ಸರಿಯಾದ ದಾಖಲೆಗಳನ್ನು ಮತ್ತು ಪುಸ್ತಕಗಳನ್ನು ನಿರ್ವಹಿಸ ಬೇಕು. ಅದನ್ನು ಚಾರ್ಟರ್ಡ್ ಅಕೌಂಟೆಂಟ್‌ಗಳು ವಾರ್ಷಿಕವಾಗಿ ಆಡಿಟ್ ಮಾಡಬೇಕು.

೬. ಖಾಸಗಿ ಕೇಂದ್ರವು ಅದರ ಇತರ ಚಟುವಟಿಕೆಗಳ ಹೊರ ತಾಗಿ, ಸಮೀಪದ ನೆರೆಹೊರೆಯ ಬಡವರಲ್ಲಿ ರೋಗನಿವಾರಣೆ ಅಥವಾ ತಡೆಗಟ್ಟುವಿಕೆಯ ಸೇವೆಯನ್ನು ಸಲ್ಲಿಸಬೇಕು.

೭. ಖಾಸಗಿ ಕೇಂದ್ರವು ಗ್ರಾಮೀಣ ಹರಿಜನರು, ಗಿರಿಜನರು, ಅಥವಾ ಇತರೆ ಹಿಂದುಳಿದ ಸಮುದಾಯಗಳ ನಡುವೆ ಕೆಲವು ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳಬೇಕು.

೮. ಖಾಸಗಿ ಕೇಂದ್ರವು ಸ್ಥಳೀಯ ಯುವಕರ ಬಗ್ಗೆ ಗಮನ ಹರಿಸಬೇಕು. ಸಾಪ್ತಾಹಿಕ ಅಥವಾ ಪಾಕ್ಷಿಕ ಅಧ್ಯಯನ ವಲಯ ಗಳು, ಪ್ರಬಂಧ-ಬರಹ, ವಾಚನ, ಸಂಗೀತ, ಭಾಷಣ ಇತ್ಯಾದಿ ಗಳಲ್ಲಿ ವಾರ್ಷಿಕ ಸ್ಪರ್ಧೆಯನ್ನು ಆಯೋಜಿಸಬಹುದು. ವಯಸ್ಕ ಹುಡುಗರು ಮತ್ತು ಹುಡುಗಿಯರು ಪ್ರತ್ಯೇಕ ಅಧ್ಯಯನ ವಲಯ ಗಳನ್ನು ಹೊಂದಿರಬೇಕು. ಸ್ವಾಮಿ ವಿವೇಕಾನಂದರ ಜನ್ಮದಿನವನ್ನು, ಅಂದರೆ ಜನವರಿ ೧೨ಅನ್ನು ಭಾರತ ಸರ್ಕಾರವು ರಾಷ್ಟ್ರೀಯ ಯುವ ದಿನವೆಂದು ಘೋಷಿಸಿದೆ. ಇದನ್ನು ಪ್ರತಿ ಕೇಂದ್ರವೂ ಆಚ ರಿಸಬೇಕು.

೯. ಧರ್ಮಗ್ರಂಥಗಳ ಬಗ್ಗೆ ತರಗತಿ ನಡೆಸುವುದರ ಜೊತೆಗೆ ರಾಮಕೃಷ್ಣ-ವಿವೇಕಾನಂದ ಭಾವಧಾರೆಯ ಸ್ಫೂರ್ತಿದಾಯಕ ಸಂದೇಶವನ್ನು ಪ್ರಚಾರ ಮಾಡಲು ಕೇಂದ್ರವು ರಾಮಕೃಷ್ಣ- ವಿವೇ ಕಾನಂದ ಸಾಹಿತ್ಯವನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡ ಬೇಕು. ಇದಲ್ಲದೆ ಪ್ರತಿ ಕೇಂದ್ರವು ರಾಮಕೃಷ್ಣ-ವಿವೇಕಾನಂದ ಸಾಹಿತ್ಯದ ಬಗ್ಗೆ ಸಾಕಷ್ಟು ಸಂಖ್ಯೆಯ ಪುಸ್ತಕಗಳನ್ನು ಹೊಂದಿರುವ ಗ್ರಂಥಾಲಯವನ್ನು ಹೊಂದಿರಬೇಕು.

೧೦. ಸಂದರ್ಭ ಬಂದಾಗಲೆಲ್ಲಾ ಖಾಸಗಿ ಕೇಂದ್ರವು ವಿಪತ್ತು ಗಳಿಂದ ಬಳಲುತ್ತಿರುವ ಜನರಿಗೆ ಪರಿಹಾರ ಸೇವೆಗಳನ್ನು ನೀಡ



ಬೇಕು. ಇದನ್ನು ಸ್ವತಂತ್ರವಾಗಿ ಅಥವಾ ಮಠ ಮತ್ತು ಮಿಷನ್ ಮಾರ್ಗದರ್ಶನದಲ್ಲಿ ಮಾಡಬಹುದು.

ಪರಿಷತ್ತಿನ ಅಧೀನದಲ್ಲಿರುವ ಕೇಂದ್ರಗಳು ಜಂಟಿಯಾಗಿ ವಾರ್ಷಿಕೋತ್ಸವ ಆಚರಿಸಬೇಕು. ಸರದಿಯ ಮೂಲಕ ವಾರ್ಷಿಕೋತ್ಸವವನ್ನು ಆಯೋಜಿಸುವ ಜವಾಬ್ದಾರಿಯನ್ನು ಪ್ರಮುಖ ಕೇಂದ್ರಗಳು ತೆಗೆದುಕೊಳ್ಳಬಹುದು. ಸಾಂಪ್ರದಾಯಿಕ ಪೂಜೆ, ಆರಾತ್ರಿಕ, ಪ್ರಸಾದ ವಿತರಣೆ ಮತ್ತು ಧಾರ್ಮಿಕ ಪ್ರವಚನಗಳಲ್ಲದೆ, ಒಂದು ದಿನವನ್ನು ಯುವಕರು ಮತ್ತು ಮಕ್ಕಳ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಮೀಸಲಿಡಬಹುದು. ವಿವಿಧ ಕೇಂದ್ರಗಳಲ್ಲಿ ನಡೆಯುವ ವಾಚನ, ಸಂಗೀತ ಇತ್ಯಾದಿ ಸ್ಪರ್ಧೆಗಳ ಬಹುಮಾನ ವಿತರಣೆ ಇಲ್ಲಿ ಅಂತ್ಯಗೊಳ್ಳಬಹುದು. ಸ್ಥಳೀಯ ಶಾಲಾಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಭಕ್ತರನ್ನು ಒಗ್ಗೂಡಿಸಿ ಮೆರವಣಿಗೆಯನ್ನು ಆಚರಣೆ ನಡೆಯುವ ಪಟ್ಟಣ ಅಥವಾ ಹಳ್ಳಿಯ ಮುಖ್ಯ ರಸ್ತೆಗಳಲ್ಲಿ ನಡೆಸಬಹುದು. ಇದನ್ನು ಸಾಮಾನ್ಯವಾಗಿ ಚಿಕ್ಕ ಸಾರ್ವಜನಿಕ ಸಭೆಯ ನಂತರ ಮಾಡಬೇಕು.

### 'ಭಾವಪ್ರಚಾರ ಪರಿಷದ್' ಎಂಬ ಒಕ್ಕೂಟದ ರಚನೆ

ಒಂದು ಸಾಮಾನ್ಯ ಗುರಿಯನ್ನು ಸಾಧಿಸಲು ಎರಡು ಅಥವಾ ಹೆಚ್ಚಿನ ಜನರು ಅಥವಾ ಸಂಸ್ಥೆಗಳು ಸಾಮಾನ್ಯ ನಿಯಮ, ಉದ್ದೇಶ ಮತ್ತು ಕಾರ್ಯಪ್ರಣಾಳಿಕೆಯ ಮೂಲಕ ಒಟ್ಟಾಗಿ ಕೆಲಸ ಮಾಡಿದಾಗ ಒಂದು ಒಕ್ಕೂಟದ ರಚನೆ ಆಗುತ್ತದೆ. ರಾಮಕೃಷ್ಣ ಭಾವಪ್ರಚಾರ ಪರಿಷದ್ ಎಂಬುದು ಇಂತಹ ಒಂದು ಒಕ್ಕೂಟ. ದೇಶದಾದ್ಯಂತ ಒಟ್ಟಾರೆ ಜಿಲ್ಲಾವಾರು ೩೬ ಭಾವಪ್ರಚಾರ ಪರಿಷತ್ತುಗಳಿವೆ ಹಾಗೂ ಇವುಗಳ ಆಶ್ರಯದಲ್ಲಿ ೧೧೩೬ ಭಾವಪ್ರಚಾರ ಆಶ್ರಮಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಸೇವಾಕಾರ್ಯವನ್ನು ನಿರ್ವಹಿಸುತ್ತಿವೆ. ದೇಶದ ೩೬ ಭಾವಪ್ರಚಾರ ಪರಿಷತ್‌ಗಳಲ್ಲಿ ಗುಜರಾತ್, ಪಶ್ಚಿಮಬಂಗಾಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಭಾವಪ್ರಚಾರ ಪರಿಷದ್ ಕೇಂದ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಇವೆ ಮತ್ತು ಭಾವಪ್ರಚಾರವು ಹೆಚ್ಚು ಪ್ರಚಲಿತವಾಗಿದೆ.

ಈ ರಾಮಕೃಷ್ಣ ಭಾವಪ್ರಸಾರದ ಆವಶ್ಯಕತೆ ಮತ್ತು ಔಚಿತ್ಯವನ್ನು ಸ್ವಾಮಿ ವಿವೇಕಾನಂದರ ಈ ಕೆಳಗಿನ ಸ್ಫೂರ್ತಿದಾಯಕ ನುಡಿಗಳ ತೀವ್ರತೆ, ಪ್ರಸ್ತುತತೆಗಳಿಂದ ಕಂಡುಕೊಳ್ಳಬಹುದು.

''ಭರತಖಂಡ ಬಹಳ ಕಾಲದಿಂದ ಕಷ್ಟವನ್ನು ಅನುಭವಿಸಿದೆ. ಸನಾತನ ಧರ್ಮ ಹಲವು ಕಾಲದಿಂದ ನೊಂದಿದೆ. ದಯಾಮಯನಾದ ಭಗವಂತ ಮತ್ತೊಮ್ಮೆ ತನ್ನ ಮಕ್ಕಳ ಉದ್ಧಾರಕ್ಕೆ ಬಂದಿರುವನು. ಪತಿತ ಭರತಖಂಡ ಮೇಲೇಳುವುದಕ್ಕೆ ಮತ್ತೊಮ್ಮೆ ಎಲ್ಲಾ ಸದವಕಾಶವನ್ನು ಕೊಟ್ಟಿರುವನು. ಭರತಖಂಡ ಶ್ರೀರಾಮಕೃಷ್ಣರ ಪದತಲದಲ್ಲಿ ಕುಳಿತುಕೊಂಡು ಮಾತ್ರ ಜಾಗೃತವಾಗಬಲ್ಲದು. ಅವರ ಜೀವನ ಮತ್ತು ಸಂದೇಶವನ್ನು ಎಲ್ಲಾ ಕಡೆಯಲ್ಲಿಯೂ ಹರಡಬೇಕು. ಸಮಾಜದ ಅಂಗಾಂಗದಲ್ಲಿ ಪ್ರವಹಿಸುವಂತೆ ಮಾಡಬೇಕು. ಇದನ್ನು ಮಾಡುವವರು ಯಾರು? ಶ್ರೀರಾಮಕೃಷ್ಣರ ಧ್ವಜವನ್ನು ಎತ್ತಿ ಜನರ ಮುಕ್ತಿಗಾಗಿ ಯಾರು ಮುಂದೆ ಸಾಗುವರು? ಅವನತಿಯ ಪ್ರಚಂಡ ಆಘಾತವನ್ನು ಮೆಟ್ಟಿ ನಿಲ್ಲುವುದಕ್ಕೆ ತಮ್ಮ ಕೀರ್ತಿ ಗೌರವ ಐಶ್ವರ್ಯ ಭೋಗ, ಈ ಪ್ರಪಂಚದ ಅಥವಾ ಬೇರೆ ಪ್ರಪಂಚದ ಸುಖದ ಭರವಸೆ ಇವುಗಳನ್ನು ತ್ಯಾಗ ಮಾಡಬಲ್ಲವರು ಯಾರು? ಕೆಲವು ತರುಣರು ಈ ಸಾಹಸಕ್ಕೆ ತಮ್ಮ ಸರ್ವಸ್ವವನ್ನೂ ತೆತ್ತಿರುವರು. ಅವರು ಎಲ್ಲೋ ಸ್ವಲ್ಪ ಮಂದಿ. ಅಂತಹ ಕೆಲವು ಸಾವಿರ ಮಂದಿಯಾದರೂ ಬೇಕು. ಅವರು ಬಂದೇ ಬರುವರು. ನಮ್ಮ ಶ್ರೀಗುರುದೇವರು ನೀನು ಅಂತಹವರಲ್ಲಿ ಒಬ್ಬನಾಗಬೇಕೆಂಬ ಭಾವವನ್ನು ನಿನಗೆ ಕೊಟ್ಟಿರುವುದು ಬಹಳ ಸಂತೋಷ. ಭಗವಂತನು ಯಾರನ್ನು ಆರಿಸಿಕೊಳ್ಳುತ್ತಾನೋ ಅವನೇ ಧನ್ಯ.''

*(ಸ್ವಾಮಿ ವಿವೇಕಾನಂದ ಕೃತಿಶ್ರೇಣಿ, ಸಂಪುಟ ೪, ಪುಟ ೨೧೩)*

ಪರಕೀಯರ ಆಳ್ವಿಕೆಯ ದಾಸ್ಯದ ಹಾಗೂ ಝುಗಝುಗಿಸುವ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಕೊಚ್ಚಿಕೊಂಡು ಹೋಗುತ್ತಿರುವ ಭರತಖಂಡದ ಜನಜೀವನದ ಏಳ್ಗೆಗೆ, ಸ್ವಾಮಿ ವಿವೇಕಾನಂದರು ಮೇಲೆ ಹೇಳಿದ ಅವರ ಕಳಕಳಿಯ, ಸ್ಫೂರ್ತಿದಾಯಕ ಮಾತನ್ನು ಅರ್ಥೈಸಿಕೊಂಡು ರಾಮಕೃಷ್ಣ ಭಾವಧಾರೆಯನ್ನು ಜನ

ಮಾನಸದಲ್ಲಿ ಬಿತ್ತಲು ನಾವೆಲ್ಲರೂ ಕಂಕಣ ಬದ್ಧರಾಗಬೇಕು ಎನ್ನುವುದು ಭಾವಧಾರೆಯ ಸಂಚನಲಕ್ಕೆ ಯೋಗ್ಯವಾದ ಆದೇಶವೆನ್ನಬಹುದು.

### ಕರ್ನಾಟಕದಲ್ಲಿ ಭಾವಪ್ರಚಾರ ಪರಿಷದ್

ಅನೇಕ ಕಾರಣಗಳಿಂದ ಭಾವಪ್ರಚಾರ ಪರಿಷದ್ ಕರ್ನಾಟಕದಲ್ಲಿ ಅಧಿಕೃತವಾಗಿ ೨೦೧೨ರಲ್ಲಿ , ಸ್ವಲ್ಪ ವಿಳಂಬವಾಗಿ ಪ್ರಾರಂಭವಾಯಿತು. ಆದರೆ ಸಹಜವಾಗಿ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರದ ಕಾರ್ಯಚಟುವಟಿಕೆಗಳು ಸಂಘಟನಾತ್ಮಕವಾಗಿ ಕರ್ನಾಟಕದಲ್ಲಿ ಅನೇಕ ದಶಕಗಳ ಹಿಂದೆ ಪ್ರಾರಂಭವಾಗಿದ್ದು, ಅದು ಜನಮಾನಸವನ್ನು ತಲುಪಿ ಮುಂಬರುವ ಅಧಿಕೃತವಾದ ಕರ್ನಾಟಕ ಭಾವಪ್ರಚಾರ ಪರಿಷದ್‌ಗೆ ಭದ್ರಬುನಾದಿಯಾಯಿತು. ಪೂಜ್ಯ ಸ್ವಾಮಿ ಹರ್ಷಾನಂದಜಿಯವರು ಕರ್ನಾಟಕ ಭಾವಪ್ರಚಾರ ಪರಿಷತ್ತಿನ ಮೊದಲ ಅಧ್ಯಕ್ಷರಾಗಿದ್ದರು ಹಾಗೂ ತುಮಕೂರು ರಾಮಕೃಷ್ಣ ಆಶ್ರಮದ ಸ್ವಾಮಿ ವೀರೇಶಾನಂದ ಸರಸ್ವತಿಯವರು ಮೊದಲ ಸಂಚಾಲಕರಾಗಿದ್ದರು. ತದನಂತರ ಬಂದಂತಹ ಅಧ್ಯಕ್ಷರು ಮತ್ತು ಸಂಚಾಲಕರು ಕರ್ನಾಟಕ ಭಾವಪ್ರಚಾರ ಪರಿಷತ್ತನ್ನು ಸುಸೂತ್ರವಾಗಿ ಮುನ್ನಡೆಸಿಕೊಂಡು ಬಂದಿದ್ದಾರೆ.

ಹೀಗೆ ಸ್ವಾಮಿ ವಿವೇಕಾನಂದರ ಜೀವನ-ಸಂದೇಶಕ್ಕೆ, ಹಾಗೂ ರಾಮಕೃಷ್ಣ ಭಾವಾಂದೋಲನಕ್ಕೆ ಸ್ವಾಮೀಜಿ ಕೊಟ್ಟ ಕರೆಗೆ ಅನುಗುಣವಾಗಿ ಕರ್ನಾಟಕ ಭಾವಪ್ರಚಾರ ಕಾರ್ಯವು ಇತ್ತೀಚಿನ ೨-೩ ದಶಕಗಳಿಂದ ಒಂದು ವಿಸ್ತೃತರೂಪವನ್ನು ತಳೆಯುತ್ತಿರುವುದನ್ನು ನಾವು ಕಾಣಬಹುದು.

ಕರ್ನಾಟಕದಲ್ಲಿ ಒಟ್ಟಾರೆ ೪೫ ಪರಿಷತ್ತಿನ ಸದಸ್ಯ ಆಶ್ರಮಗಳಿವೆ. ಕರ್ನಾಟಕದಲ್ಲಿ ಭಾವಪ್ರಚಾರದಲ್ಲಿ ಮುಖ್ಯವಾಗಿ ಈ ವಾಹಿನಿಗಳು ವಿಶಿಷ್ಟವಾಗಿ ೩ ರೂಪಗಳಲ್ಲಿ ಹೊರಹೊಮ್ಮಿವೆ:

೧. ತ್ಯಾಗ ಜೀವನವನ್ನು ನಡೆಸುತ್ತಿರುವ ಸಂನ್ಯಾಸಿಗಳು ನಿರ್ವಹಿಸುತ್ತಿರುವ ಆಶ್ರಮಗಳು.

೨. ತ್ಯಾಗಜೀವನವನ್ನು ನಡೆಸುವ ಸಾಧ್ವಿ ಸಂನ್ಯಾಸಿನಿಯರು ನಿರ್ವಹಿಸುತ್ತಿರುವ ಆಶ್ರಮಗಳು.

೩. ಮೂರನೆಯದಾಗಿ ಗೃಹಸ್ಥರು, ಋಷಿ ಸದೃಶ ಜೀವನವನ್ನು ನಡೆಸುತ್ತಿರುವ ರಾಮಕೃಷ್ಣ-ವಿವೇಕಾನಂದರ ಭಕ್ತರು ಮತ್ತು ಹಿತೈಷಿಗಳಿಂದ ಸಂಘಟಿತವಾದ ಮತ್ತು ವ್ಯವಸ್ಥಿತವಾದ ಪ್ರಭಾವಶಾಲಿ ಸಂಸ್ಥೆಗಳು.

ಕರ್ನಾಟಕದಲ್ಲಿ ಅಧಿಕೃತವಾದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಆಶ್ರಮಗಳು ಇಲ್ಲದ ಮೂಲೆ ಮೂಲೆಗಳಲ್ಲಿ ವಿಶೇಷವಾಗಿ ಸಂನ್ಯಾಸಿಗಳೇ ನಡೆಸುತ್ತಿರುವ ಸ್ವತಂತ್ರ ಆಶ್ರಮಗಳು ಪ್ರಮುಖವಾಗಿ ವಿವಿಧ ರೀತಿಯಲ್ಲಿ ತಮ್ಮ ತಮ್ಮ ಸೇವೆಯನ್ನು ಸಲ್ಲಿಸುತ್ತಿವೆ. ಇವುಗಳಿಗೆ ಮೂಲಪ್ರೇರಣೆ ಮತ್ತು ಚಾಲನೆ ನೀಡಿದವರು ಸ್ವಾಮಿ ಪುರುಷೋತ್ತಮಾನಂದಜಿಯವರು. ಅವರು ಅನೇಕ ಮಂದಿ ಯುವಕರಿಗೆ ಆಧ್ಯಾತ್ಮಿಕ ಸೇವೆಯನ್ನು ರಾಮಕೃಷ್ಣ ಭಾವಧಾರೆಯ ಮೂಲಕ ಮಾಡುವಂತೆ ಪ್ರೇರೇಪಿಸಿದರು. ಕರ್ನಾಟಕದಾದ್ಯಂತ ನೂರಾರು ಗೃಹಸ್ಥ ಭಕ್ತರನ್ನು ವಿವಿಧ ಸಂಸ್ಥೆಗಳಲ್ಲಿ ಕಾರ್ಯ ಪ್ರವೃತ್ತರನ್ನಾಗಿಸಿ, ರಾಮಕೃಷ್ಣ ಭಾವಧಾರೆಯನ್ನು ಈ ರಾಜ್ಯದಲ್ಲಿ ವಿಸ್ತೃತಗೊಳಿಸಲು ಅವರು ಪ್ರಯತ್ನಿಸಿದರು. ನಾವಿಂದು ಕಾಣುವ ಸಂನ್ಯಾಸಿ ಮತ್ತು ಸಾಧ್ವಿಗಳು ನಡೆಸುತ್ತಿರುವ ಭಾವಪ್ರಚಾರ ಪರಿಷತ್ತಿನ ಅನೇಕ ಆಶ್ರಮಗಳು ಸ್ವಾಮಿ ಪುರುಷೋತ್ತಮಾನಂದರ ಆಧ್ಯಾತ್ಮಿಕ ಪ್ರೇರಣೆಯಿಂದ ಉಗಮಗೊಂಡವು.

### ಕರ್ನಾಟಕದಲ್ಲಿ ಗೃಹಸ್ಥ ಭಕ್ತರಿಂದ ಭಾವಪ್ರಚಾರ- ಕಿರುನೋಟ

ಇದಲ್ಲದೆ ಇತರ ಕರ್ನಾಟಕ ಭಾವಪ್ರಚಾರದ ಖ್ಯಾತ ಅಂಗ ಸಂಸ್ಥೆಗಳಾದಂತಹ ಬುಡಕಟ್ಟು ಜನಾಂಗಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಡಾ. ಸುದರ್ಶನ್ ಅವರು ಬಿಳಿಗಿರಿರಂಗನ ಬೆಟ್ಟದಲ್ಲಿ ಪ್ರಾರಂಭಿಸಿರುವ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಹೆಗ್ಗಡದೇವನಕೋಟೆಯಲ್ಲಿ ಡಾ. ಬಾಲಸುಬ್ರಹ್ಮಣ್ಯಂರವರು ಪ್ರಾರಂಭಿಸಿರುವ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ರಾಮಕೃಷ್ಣ ಭಾವಧಾರೆಯನ್ನು ಕರ್ನಾಟಕದ ಆದಿವಾಸಿಗಳಿಗೆ ತಲುಪಿಸಲು ಶ್ರಮಿಸುತ್ತಿವೆ. ಮೈಸೂರಿನ ರಾಮಕೃಷ್ಣನಗರದಲ್ಲಿರುವ 'ರಾಮಕೃಷ್ಣ ಸೇವಾ ಸಂಘ'ದ ರಾಮಕೃಷ್ಣ ವಿದ್ಯಾಕೇಂದ್ರ ಮತ್ತು ಬನ್ನೂರಿನ ಶ್ರೀ ಪ್ರಕಾಶ್‌ರವರು ಪ್ರಾರಂಭಿಸಿರುವ ವಿವೇಕಾನಂದ ಶಿಕ್ಷಣ ಸಂಸ್ಥೆಗಳು, ಬೆಂಗಳೂರಿನ ಶ್ರೀ ಕೃಷ್ಣಮೂರ್ತಿಯವರು (ಕಿಟ್ಟಿ ಮೇಷ್ಟ್ರು) ಪ್ರಾರಂಭಿಸಿರುವ ವಿವೇಕಾನಂದ ಎಜುಕೇಷನ್ ಸೊಸೈಟಿ, ಬಳ್ಳಾರಿ ಜಿಲ್ಲೆಯ ಕುಡತಿನಿ ಗ್ರಾಮದಲ್ಲಿ ಶ್ರೀ ಪಂಪಾಪತಿಯವರು ಅನೇಕ ವರ್ಷಗಳಿಂದ ನಡೆಸುತ್ತಿರುವ ವಿದ್ಯಾರ್ಥಿನಿಲಯ ಮತ್ತು ಶಾಲೆ, ಶಿರಸಿಯ ಶ್ರೀ ಮುರಾರಿ ಭಟ್ ಅವರ ಸ್ಟೂಡೆಂಟ್ ಹೋಂ ಹೀಗೆ ಇನ್ನೂ ಅನೇಕಾನೇಕ ಗೃಹಸ್ಥ ಭಕ್ತರು ತಾವು ಸ್ಥಾಪಿಸಿದ ಸಂಸ್ಥೆಗಳ ಮೂಲಕ ಮತ್ತು ವಿವಿಧ ರೀತಿಯ ಸಮಾಜ ಸೇವೆಯ ಮೂಲಕ ಕರ್ನಾಟಕದಾದ್ಯಂತ ರಾಮಕೃಷ್ಣ ಭಾವಪ್ರಚಾರವನ್ನು ಜನಮಾನಸಕ್ಕೆ ತಲುಪಿಸುವ ಮಹತ್ಕಾರ್ಯದಲ್ಲಿ ತೊಡಗಿರುವುದನ್ನು ಕಾಣಬಹುದು. ಹೀಗೆ ರಾಮಕೃಷ್ಣ ಭಾವಧಾರೆಯ ವಿಸ್ತಾರ ವಿವಿಧ ರೀತಿಯ ಸೇವಾ ವಾಹಿನಿಗಳ ಮೂಲಕ ಕರ್ನಾಟಕದಾದ್ಯಂತ ಅಭಿವ್ಯಕ್ತವಾಗಿವೆ.

### ಕರ್ನಾಟಕದಲ್ಲಿ ಸಾಹಿತ್ಯದ ಮೂಲಕ ಭಾವಪ್ರಚಾರ

**ಸ್ವಾಮಿ ಸೋಮನಾಥಾನಂದರ ಅನೇಕ ದಶಕಗಳ ಪ್ರಾರಂಭಿಕ ಸಾಹಿತ್ಯ ಸೇವೆ:** ಕರ್ನಾಟಕದಲ್ಲಿ ಅಧಿಕೃತವಾಗಿ ರಾಮಕೃಷ್ಣ ಭಾವಪ್ರಚಾರ ಪರಿಷದ್ ೨೦೧೨ರಲ್ಲಿ ಪ್ರಾರಂಭವಾಗಿದ್ದರೂ, ಅನೇಕ ದಶಕಗಳ ಹಿಂದೆ ಔಪಚಾರಿಕವಾಗಿ ರಾಮಕೃಷ್ಣ ಭಾವಪ್ರಚಾರ ಕರ್ನಾಟಕದಲ್ಲಿ ಮುಖ್ಯವಾಗಿ ಸಾಹಿತ್ಯ ಕ್ಷೇತ್ರದಲ್ಲಿ ತುಂಬಾ ಪರಿಣಾಮಕಾರಿಯಾಗಿ ಪ್ರಾರಂಭವಾಗಿ, ರಾಮಕೃಷ್ಣ-ಸಾಹಿತ್ಯದ ಅಭಿವ್ಯಕ್ತಿಗೆ ಮುನ್ನುಡಿಯಂತಿತ್ತು. ಇದರಲ್ಲಿ ಮುಖ್ಯವಾಗಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಅತ್ಯಂತ ಸರಳಭಾಷೆಯಲ್ಲಿ ಸ್ವಾಮಿ ಸೋಮನಾಥಾನಂದರು 'ಗೀತಾಭಾವಧಾರೆ' 'ಉಪನಿಷತ್ ಭಾವ



ಮೈಸೂರಿನಲ್ಲಿ ಭಕ್ತಸಮ್ಮೇಳನ – ೨೦೨೪

ಧಾರೆ', ಹಾಗೂ ರಾಮಕೃಷ್ಣ-ಶಾರದಾದೇವಿ-ವಿವೇಕಾನಂದರ ಜೀವನ, ಸಂದೇಶಗಳನ್ನೊಳಗೊಂಡ ಹಲವು ಕೃತಿಗಳನ್ನು ರಚಿಸಿದರು. ಅವರು ತಮ್ಮ ಅನೇಕಾನೇಕ ಸಾಹಿತ್ಯ ಕೃತಿಗಳ ಮೂಲಕ ಕರ್ನಾಟಕದ ಜನತೆಗೆ ರಾಮಕೃಷ್ಣ ವಿವೇಕಾನಂದರ ಭಾವಧಾರೆಯನ್ನು ತಲುಪಿಸಲು ಹಲವು ದಶಕಗಳ ಕಾಲ ಶ್ರಮಿಸಿದರು. ತದನಂತರ ಸ್ವಾಮಿ ಆದಿದೇವಾನಂದರು ಉಪನಿಷತ್, ಗೀತೆ ಮುಂತಾದ ಶಾಸ್ತ್ರಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದರು.

### ರಾಷ್ಟ್ರಕವಿ ಕುವೆಂಪು ಮತ್ತು ಇತರರ ಮೂಲಕ

ಇದೇ ರೀತಿ ರಾಷ್ಟ್ರಕವಿ ಕುವೆಂಪುರವರು ರಾಮಕೃಷ್ಣ ವಿವೇಕಾನಂದರ ಜೀವನ, ಸಂದೇಶವನ್ನು ಕುರಿತು ಬರೆದ ಪುಸ್ತಕಗಳು ಅತ್ಯಂತ ಜನಪ್ರಿಯವಾಗಿವೆ. ರಾಮಕೃಷ್ಣ ಭಾವಧಾರೆಗೆ ಅವರ ಒಲವು ಮತ್ತು ಸೇವೆಯು ಅನನ್ಯ ಮತ್ತು ಶಿಖರಪ್ರಾಯವಾಗಿರುವುದನ್ನು ಅವರ ಸ್ವಯಂಕೃತಿಯಾದ 'ನೆನಪಿನ ದೋಣಿಯಲ್ಲಿ' ಪುಸ್ತಕದಿಂದ ನಾವು ಕಂಡುಕೊಳ್ಳಬಹುದು. ಅವರು ಸ್ವಾಮಿ ಸಿದ್ಧೇಶ್ವರಾನಂದಜಿಯವರಿಂದ ಪ್ರೇರಿತರಾಗಿ ೧೦ ವರ್ಷಗಳ ಕಾಲ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ತಂಗಿ ವ್ಯಾಸಂಗ ಮುಂದುವರಿಸಿದ್ದುದು ರಾಮಕೃಷ್ಣ ಭಾವಪ್ರಚಾರದ ಒಂದು ಮಹಾನ್ ಶಕ್ತಿಯಾಗಿ ಪರಿಣಮಿಸಿತು. ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರು, ಡಿ.ವಿ. ಗುಂಡಪ್ಪನವರು, ಬಿ. ಎಂ. ಶ್ರೀಕಂಠಯ್ಯ, ಶಿವರಾಮ ಕಾರಂತ, ಡಾ. ಸಿ ಪಿ ಕೆ, ದೇಜಗೌ, ಡಾ. ಪ್ರಭುಶಂಕರ್ ಮುಂತಾದ ಅನೇಕ ಶ್ರೇಷ್ಠ ಸಾಹಿತಿಗಳು ರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ತಮ್ಮದೇ ಆದ ರೀತಿಯಲ್ಲಿ ಪುಷ್ಟಿಯನ್ನು ನೀಡಿದ್ದಾರೆ. ಮೈಸೂರು-ಬೆಂಗಳೂರು ನಗರದ ಸಾಹಿತಿಗಳು ರಾಮಕೃಷ್ಣ ಆಶ್ರಮದ ಸಮೀಪವರ್ತಿಗಳಾಗಿ ರಾಮಕೃಷ್ಣ-ವಿವೇಕಾನಂದರ ಜೀವನ ಸಂದೇಶವನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಆಧುನಿಕ ಕರ್ನಾಟಕದ ಪುನರುತ್ಥಾನಕ್ಕೆ ಅತ್ಯಂತ ಆವಶ್ಯಕವಾದ ಪ್ರೇರಣಾಶಕ್ತಿಯಾಗಿ ಮೂಡಿ ಬಂದಿದ್ದಾರೆ.

### ಹಿರಿಯ ಯತಿಗಳ ಸಾಹಿತ್ಯರಚನೆ

ಸ್ವಾಮಿ ಪುರುಷೋತ್ತಮಾನಂದರು ರಚಿಸಿದ ಅನರ್ಘ್ಯವಾಗಿರುವ ದಿವ್ಯತ್ರಯರ ಜೀವನಸಂದೇಶದ ಕುರಿತ ಪುಸ್ತಕಗಳು ಕರ್ನಾಟಕದ ಜನತೆಗೆ ದಿವ್ಯತ್ರಯರ ಮಹಿಮೆಯನ್ನು ಅತ್ಯಂತ ಸ್ಫೂರ್ತಿದಾಯಕವಾಗಿ, ಮನಮುಟ್ಟುವಂತೆ ಪರಿಚಯಿಸಿದುವು. ಸ್ವಾಮಿ ಹರ್ಷಾನಂದರು ತಮ್ಮ ಗಾಢ ಅಧ್ಯಯನ ಮತ್ತು ಸಂಸ್ಕೃತದಲ್ಲಿ ತಮಗಿದ್ದ ಪಾಂಡಿತ್ಯವನ್ನು ಬಳಸಿಕೊಂಡು ಸನಾತನ ಹಿಂದೂ ಸಂಸ್ಕೃತಿಯ ಹಾಗೂ ದಿವ್ಯತ್ರಯರ ಆದರ್ಶಗಳನ್ನು ತಮ್ಮ ವಿವಿಧ ಪುಸ್ತಕಗಳಲ್ಲಿ ಪ್ರಕಟಿಸಿದರು. ಈ ಮೂಲಕ ಅವರು ಭಾವಧಾರೆಗೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.'The Encyclopedia of Hinduism' ಎಂಬುದು ಸ್ವಾಮಿ ಹರ್ಷಾನಂದಜಿಯವರ ವಿಶೇಷ ಕೃತಿ. ಬಳಿಕ ಸ್ವಾಮಿ ಜಗದಾತ್ಮಾನಂದಜಿಯವರು ಕರ್ನಾಟಕಕ್ಕೆ ಮತ್ತು ರಾಮಕೃಷ್ಣ ಭಾವಧಾರೆಗೆ ನೀಡಿದ ಅಮೂಲ್ಯ ಕೊಡುಗೆಯೆಂದರೆ ಯುವಕರಿಗೆ ಮತ್ತು ಜೀವನದಲ್ಲಿ ಸಂಕಷ್ಟದಲ್ಲಿರುವವರಿಗೆ ಭರವಸೆ ಮತ್ತು ಸಂತಸವನ್ನು ನೀಡುವ ಪ್ರಸಿದ್ಧ ಕೃತಿ – 'ಬದುಕಲು ಕಲಿಯಿರಿ.' ಇದು ಅತ್ಯಂತ ಬೇಡಿಕೆಯಿರುವ ಸ್ಫೂರ್ತಿದಾಯಕ ಕನ್ನಡ ಕೃತಿ ಎಂದು ಹೆಸರುವಾಸಿಯಾಗಿದೆ. ಸ್ವಾಮಿ ನಿತ್ಯಸ್ಥಾನಂದಜಿಯವರು ಕೂಡ ತಮ್ಮ ಅನೇಕ ಮೌಲಿಕ ಸಾಹಿತ್ಯ ರಚನೆಯಿಂದ ಮತ್ತು 'ವಿವೇಕಪ್ರಭ' ಕನ್ನಡ ಮಾಸಪತ್ರಿಕೆಯ ಮೊದಲ ಐದು ವರ್ಷಗಳ ಕಾಲ ಸಂಪಾದಕರಾಗಿ ತಮ್ಮ ಅಮೂಲ್ಯ ಸಾಹಿತ್ಯ ಸೇವೆಯನ್ನು ಸಲ್ಲಿಸಿರುತ್ತಾರೆ. ಸ್ವಾಮಿ ರಾಘವೇಶಾನಂದಜಿಯವರು ಮಕ್ಕಳಿಗಾಗಿ ಹಲವು ಪುಸ್ತಕಗಳನ್ನು ರಚಿಸುವ ಮೂಲಕ ಅತ್ಯಂತ ಆವಶ್ಯಕ ಸೇವೆಯನ್ನು ಸಲ್ಲಿಸಿರುತ್ತಾರೆ. ಭಾವಧಾರೆಯ ಅನೇಕ ಸ್ವತಂತ್ರ ಕೇಂದ್ರಗಳಿಂದ ಹೊರಬರುತ್ತಿರುವ ಪತ್ರಿಕೆಗಳಾದ 'ವಿವೇಕಹಂಸ', 'ನವಚಿಂತನ', 'ವಿವೇಕದೀಪ್ತಿ', 'ಶ್ರೀನುಡಿ' ಮೊದಲಾದವುಗಳು ರಾಮಕೃಷ್ಣ ಭಾವಧಾರೆಯನ್ನು ಕರ್ನಾಟಕದ ಮೂಲೆ ಮೂಲೆಗೂ ಪಸರಿಸಲು ಶ್ರಮಿಸುತ್ತಿವೆ. ಇತ್ತೀಚಿಗಿನ ವರ್ಷಗಳಲ್ಲಿ ಭಾವಪ್ರಚಾರ ಪರಿಷತ್ತಿನ ಕೇಂದ್ರವಾದ ಗದಗಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ನಿರ್ಭಯಾನಂದರು, ಮತ್ತು ತುಮಕೂರು ಆಶ್ರಮದ ಸ್ವಾಮಿ ವೀರೇಶಾನಂದರು, ರಾಮಕೃಷ್ಣ- ವಿವೇಕಾನಂದ ಭಾವಪ್ರಚಾರವನ್ನು ಮುಖ್ಯವಾಗಿ ತಮ್ಮ ಸತ್ಸಂಗ ಮತ್ತು ಪ್ರವಚನಗಳ ಮೂಲಕ ಕರ್ನಾಟಕದಾದ್ಯಂತ ಪಸರಿಸುತ್ತ ತಮ್ಮ ಅಮೂಲ್ಯವಾದ ಬೌದ್ಧಿಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೀಗೆ ಕರ್ನಾಟಕದಲ್ಲಿ ಸಾಹಿತ್ಯಿಕ ರಾಮಕೃಷ್ಣ ಭಾವಧಾರೆಯ ಪ್ರಸಾರಕ್ಕೆ ಅನೇಕ ವರ್ಷಗಳಿಂದ ಸಾಧುಸಂನ್ಯಾಸಿಗಳು ಶ್ರಮಿಸಿ ದಿವ್ಯತ್ರಯರ ಜೀವನಸಂದೇಶವನ್ನು ಜನಮಾನಸಕ್ಕೆ ಸಾಹಿತ್ಯದ ಮೂಲಕ ತಲುಪಿಸಲು ಕಾರ್ಯತತ್ಪರರಾಗಿರುತ್ತಾರೆ.






## ಭಾವಪ್ರಚಾರಕ್ಕೆ ಸ್ವಾಮಿ ವಿವೇಕಾನಂದರ ಕರೆ

‘‘ಏಳಿ ಜಾಗೃತರಾಗಿ, ಆಧ್ಯಾತ್ಮಿಕ ಮಹಾತರಂಗ ಒಂದು ಬರುತ್ತಿದೆ. ಮುಂದೆ ನಡೆಯಿರಿ. ಸ್ತ್ರೀಯರು ಪುರುಷರು ಚಂಡಾಲನ ಪರಿಯಂತರ ಎಲ್ಲರೂ ಮುಂದೆ ಸಾಗಿ, ಅವರೆದುರಿಗೆ ಎಲ್ಲರೂ ಪವಿತ್ರ. ಮುಂದೆ! ಮುಂದೆ! ನುಗ್ಗಿ ನಡೆಯಿರಿ, ಮುಂದೆ! ಗೌರವ, ಕೀರ್ತಿ, ಭಕ್ತಿ, ಮುಕ್ತಿಗಳನ್ನು ಲಕ್ಷಿಸುವುದಕ್ಕೆ ಸಮಯವಿಲ್ಲ. ಬೇರೆ ಯಾವುದಾದರೂ ಒಂದು ಕಾಲದಲ್ಲಿ ಇವುಗಳನ್ನು ನೋಡಿಕೊಳ್ಳೋಣ. ಆ ಮಹಾಪುರುಷರ ಶೀಲ, ಅವರ ಪವಿತ್ರ ಜೀವನ, ಅವರ ದಿವ್ಯ ಉಪದೇಶಾಮೃತವನ್ನು ಅವಿಶ್ರಾಂತವಾಗಿ ಪ್ರಚಾರ ಮಾಡುವುದಕ್ಕೆ ಮಾತ್ರ ಈ ಒಂದು ಜನ್ಮವನ್ನು ಮೀಸಲಾಗಿಡೋಣ. ಇದೊಂದೇ ನಾವು ಮಾಡಬೇಕಾದ ಕೆಲಸ. ಬೇರೇನೂ ಇಲ್ಲ. ಅವರ ಹೆಸರು ಎಲ್ಲೆಲ್ಲಿ ಹರಡುವುದೋ ಅಲ್ಲಿರುವ ಕ್ರಿಮಿಕೀಟಗಳು ಕೂಡ ದೇವ ಸ್ವರೂಪವನ್ನು ಪಡೆಯುವುವು. ಈಗಾಗಲೇ ಹೊಂದುತ್ತಿರುವರು. ನಿಮಗೆ ಕಣ್ಣುಗಳಿವೆ, ಕಾಣುವುದಿಲ್ಲವೇನು? ಇದು ಒಂದು ಕಾಡುಹರಟೆಯೆ? ಇದು ಒಂದು ತಮಾಷೆಯೆ? ‘ಉತ್ತಿಷ್ಠತ! ಜಾಗ್ರತ!!’ ಏಳಿ, ಜಾಗೃತರಾಗಿ. ಹೇ ದೇವ! ಭಗವಂತ ನಿಮ್ಮ ಹಿಂದಿರುವನು. ನಾನು ಇನ್ನು ಹೆಚ್ಚು ಬರೆಯಲಾರೆ. ಮುಂದೆ ಹೆಜ್ಜೆ ಇಡಿ! ಯಾರು ಈ ನನ್ನ ಪತ್ರವನ್ನು ಓದುತ್ತಾರೆಯೋ ಅವರಿಗೆ ನನ್ನ ಸ್ಫೂರ್ತಿ ಬರುವುದು ಎಂದು ಹೇಳುತ್ತೇನೆ. ಶ್ರದ್ಧೆ ಇಡಿ, ಮುಂದೆ ನಡೆಯಿರಿ! ಹೇ ಜಗದೀಶ! ಯಾರೋ ನನ್ನ ಕೈಗಳನ್ನು ಹಿಡಿದು ಈ ರೀತಿ ಬರೆಯುವಂತೆ ಪ್ರೇರೇಪಿಸುತ್ತಿರುವಂತೆ ತೋರುತ್ತದೆ. ಮುಂದೆ ನಡೆಯಿರಿ. ಹೇ ಜಗದೀಶ! ಎಲ್ಲರೂ ಈ ಮಹಾ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವರು! ಎಚ್ಚರಿಕೆ! ಆ ಮಹಾಪುರುಷರು ಬರುತ್ತಿರುವರು. ಯಾರು ಅವರಿಗೆ ಸೇವೆ ಸಲ್ಲಿಸಲು ಸಿದ್ಧರಾಗಿರುವರು? ಅವರನ್ನೆಲ್ಲ, ಅವರ ಮಕ್ಕಳನ್ನು, ದೀನರು ಪದದಲಿತರು ಪಾಪಿಗಳು ದುಃಖಿಗಳು, ಕ್ರಿಮಿಕೀಟದವರೆವಿಗೆ ಎಲ್ಲರಿಗೂ ಸೇವೆ ಸಲ್ಲಿಸುವುದಕ್ಕೆ ಯಾರು ಸಿದ್ಧರಾಗಿರುವರೋ ಅವರ ಹೃದಯದಲ್ಲಿ ಗುರುದೇವನು ಆವಿರ್ಭವಿಸುವನು. ಅವರ ನಾಲಗೆಯ ಮೂಲಕ ಸಕಲಕಲಾಧಿದೇವಿ ಶಾರದೆ ಮಾತನಾಡುವಳು. ಜಗನ್ಮಯಿ ಮಹಾಶಕ್ತಿ ಅವರ ಹೃದಯದಲ್ಲಿ ನೆಲೆಸುವಳು.’’

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೪, ಪುಟ ೨೨೩)*

ಸ್ವಾಮೀಜಿಯವರು ಇಲ್ಲಿ ನಮಗೆ ಶ್ರೀರಾಮಕೃಷ್ಣರ ಸೂಕ್ಷ್ಮವಾದ, ಸುಪ್ತ ಮತ್ತು ಅಂತರ್ಗತವಾದ ಭಾವಧಾರೆಯು ಒಂದು ಪ್ರಚಂಡ ಆಧ್ಯಾತ್ಮಿಕ ಶಕ್ತಿಯಾಗಿ, ಅಭಿವೃದ್ಧಿಪರ ಮತ್ತು ಸತ್ಯ ಶೋಧಕ ಮಾನವಬುದ್ಧಿಯ ಕರೆಗೆ ಸ್ಪಂದಿಸಿ, ದೇಶವ್ಯಾಪಿಯಾಗುತ್ತಾ ಮುಂದೆ ವಿಶ್ವವ್ಯಾಪಿಯಾಗುವ ಅವರ ದರ್ಶನವನ್ನು ಮತ್ತು ಆಂತರಿಕ ಚಿಂತನೆಯನ್ನು ನಮ್ಮ ಮುಂದಿಡುತ್ತಿದ್ದಾರೆ. ರಾಮಕೃಷ್ಣ ಭಾವಧಾರೆಯ ಸಂಚಾಲಕರಾದ ನಾವೆಲ್ಲರೂ ಇದನ್ನು ಸ್ವೀಕರಿಸಿ, ಚಿಂತಿಸಿ, ಮಂಥಿಸಿ ಕಾರ್ಯೋನ್ಮುಖರಾಗಬೇಕು.

## ಉಪಸಂಹಾರ

ರಾಮಕೃಷ್ಣ-ವಿವೇಕಾನಂದ-ಶಾರದಾದೇವಿ-ಕೇಂದ್ರಿತ ಆಧ್ಯಾತ್ಮಿಕ ಭಾವಸ್ಪಂದನವು ಭಾರತದಾದ್ಯಂತ ಹಾಗೂ ಪ್ರಪಂಚದ ವಿವಿಧ ದೇಶಗಳಲ್ಲಿ ಉದಯಿಸಿ ವಿಸ್ತರಿಸುತ್ತಿದೆ. ಈ ಭಾವಾಂದೋಲನವು ಸನಾತನ ಆಧ್ಯಾತ್ಮಿಕ ಸತ್ಯವನ್ನು, ಸಂಸ್ಕೃತಿಯನ್ನು ಪುಷ್ಟಿಗೊಳಿಸುವ, ರಾಮಕೃಷ್ಣರ ಅವತರಣದ ಧ್ಯೇಯೋದ್ದೇಶವನ್ನು ಪಸರಿಸುವ ಮತ್ತು ಪ್ರಪಂಚದಲ್ಲಿರುವ ನಾಸ್ತಿಕತೆಯನ್ನು ಹೋಗಲಾಡಿಸಿ ಆಸ್ತಿಕ್ಯವನ್ನು ಸ್ಥಾಪಿಸುವ ಸರ್ವಧರ್ಮಗಳ ಆಧ್ಯಾತ್ಮಿಕ ಸಾರವನ್ನು ಅರ್ಥೈಸಲು ಸಹಕಾರಿಯಾಗಿದೆ. ಮಾನವಕುಲವು ಶಾಂತಿ, ಸೌಹಾರ್ದತೆಯಿಂದ ಬಾಳಲು ಮತ್ತು ಎಲ್ಲರಲ್ಲಿ ಸಮಾನವಾಗಿ ಅಂತರ್ಗತವಾದ ಸುಪ್ತ ದೈವತ್ವದ ಅನುಭೂತಿಯನ್ನು ಪಡೆಯಲು ಈ ಆದರ್ಶಗಳು ದಾರಿದೀಪವಾಗಿವೆ. ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೆ ಮನುಷ್ಯನ ಮನಸ್ಸಿನಲ್ಲಿ ಉದ್ಭವವಾದ ಜ್ಞಾನರಾಶಿಯನ್ನು ರಾಮಕೃಷ್ಣ-ವಿವೇಕಾನಂದ-ಜ್ಞಾನಸಂಚಲನವು ಚಿಂತಿಸಿ, ಮಂಥಿಸಿ, ಸರಳೀಕರಿಸಿ, ವರ್ತಮಾನಕ್ಕೆ ಅನ್ವಯಿಸಿ ಜನತೆಗೆ ನೀಡಿದೆ. ಭವಿಷ್ಯದ ಆವಶ್ಯಕತೆಗಳಿಗೆ ಅನುಗುಣವಾಗುವಂತೆ ವಿಕಾಸದ ವಿವಿಧ ಹಂತಗಳಲ್ಲಿರುವ ಎಲ್ಲರಿಗೂ ರಾಮಕೃಷ್ಣ ವಿವೇಕಾನಂದ ಭಾವಧಾರೆಯು ಸುಲಭವಾಗಿ ತಿಳಿಯುವಂತೆ ಮಾರ್ಗಸೂಚಿಕೆಯನ್ನು ನೀಡಿದೆ ಎನ್ನಬಹುದು.

ರಾಮಕೃಷ್ಣ-ವಿವೇಕಾನಂದರ ಈ ವಿಶಿಷ್ಟ ಆಧ್ಯಾತ್ಮಿಕ ಅನುಭೂತಿಗಳ ಸರಣಿ, ಮತ್ತು ಭಗವದನ್ವೇಷಣೆಯನ್ನು ಪ್ರೇರೇಪಿಸುವ ಅವರ ಸುಲಭ ಸರಳ ಅನುಭವ-ಆಧಾರಿತ ಪರಿಣಾಮಕಾರಿ ಸಂದೇಶಗಳು, ಆಧುನಿಕ ಯುಗದಲ್ಲಿ ಎಲ್ಲರೂ ತಿಳಿಯಬಹುದಾದ ಅವರ ಆಧ್ಯಾತ್ಮಿಕ ಪಥ ಸಂಚಲನವು – ದೇಶದಾದ್ಯಂತ ಸಹಸ್ರಾರು ಸಾಧಕರನ್ನು ದೈವಸಾಕ್ಷಾತ್ಕಾರಕ್ಕೋಸ್ಕರ ಪ್ರೇರೇಪಿಸುತ್ತಿರುವ ಒಂದು ಮೌನ-ಸುಪ್ತ-ಆಧ್ಯಾತ್ಮಿಕ ಕ್ರಾಂತಿ ಎನ್ನಬಹುದು. ✽